# ಪರಿವಿಡಿ

## ಅಧ್ಯಾಯ – 1


| ಕ್ರ.ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1 | ಇಲಾಖೆಯ ದೃಷ್ಟಿಕೋನ ಮತ್ತು ಗುರಿ | 4 |
| 2 | ಇಲಾಖೆಯ ಸಂಕ್ಷಿಪ್ತ ಧ್ಯೇಯ್ಯೋದ್ದೇಶಗಳು | 4 - 5 |
| 3 | ಆಡಳಿತ ವ್ಯವಸ್ಥೆ | 5 - 7 |
| 4 | ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಶಾಸನಗಳು | 7 - 8 |
| 5 | ಇಲಾಖೆಯ ಮುಖ್ಯ ಕಾರ್ಯಚಟುವಟಿಕೆಗಳು | 8 - 10 |


## ಅಧ್ಯಾಯ - 2


| ಕ್ರ.ಸಂ | ವಿಷಯ | ಪುಟ ಸಂಖ್ಯೆ |
|---|---|---|
| 1 | ಇಲಾಖೆಯ ಕಾರ್ಯನಿರ್ವಹಣೆ – ಕಾರ್ಖಾನೆಗಳ ವಿಭಾಗ | 11 - 18 |
| 2 | ಇಲಾಖೆಯ ಕಾರ್ಯನಿರ್ವಹಣೆ – ಬಾಯ್ಲರುಗಳ ವಿಭಾಗ | 18 - 19 |
| 3 | ಪ್ರಸ್ತುತ ಜಾರಿಯಲ್ಲಿರುವ ಯೋಜನಾ ಕಾರ್ಯಕ್ರಮಗಳು | 20 |
| 4 | ಪೂರಕ ಚಟುವಟಿಕೆಗಳು | 20 - 22 |
| 5 | ಇಲಾಖೆಯ ಆಯವ್ಯಯದ ಮಾಹಿತಿ | 22 - 23 |
| 6 | ಅನುಬಂಧ - ಅ [ಆರ್ಗನೈಸೇಶನ್ ಚಾರ್ಟ್] | 24 |
| 7 | ಅನುಬಂಧ - ಆ [ಸಾಂಖ್ಯಿಕ ವಿವರ-ಕಾರ್ಖಾನೆಗಳ ವಿಭಾಗ] | 25 - 26 |
| 8 | ಅನುಬಂಧ - ಇ [ಸಾಂಖ್ಯಿಕ ವಿವರ-ಬಾಯ್ಲರುಗಳ ವಿಭಾಗ] | 27 - 28 |

ಎಲ್ಲಾ ಅಪಾಯಕಾರಿ ಕಾರ್ಖಾನೆಗಳಿಗೆ ಆನ್-ಸೈಟ್ ಎಮರ್ಜೆನ್ಸಿ ಪ್ಲಾನ್ ಅನ್ನು ಏಕರೂಪವಾಗಿ ತಯಾರಿಸಿ ತುರ್ತು ಪರಿಸ್ಥಿತಿಯಲ್ಲಿ ಪರಿಸ್ಥಿತಿಯನ್ನು ನಿಭಾಯಿಸುವ ನಿಟ್ಟಿನಲ್ಲಿ ಅನುಕೂಲವಾಗುವಂತೆ ಸನ್ನದ್ದರಾಗಿರಲು, ಮಾದರಿ ಆನ್-ಸೈಟ್ ಎಮರ್ಜೆನ್ಸಿ ಪ್ಲಾನ್ ತಯಾರಿಸಿ ಇಲಾಖೆಯ ವೆಬ್-ಸೈಟ್ ಮೂಲಕ ಪ್ರಚುರ ಪಡಿಸಲಾಗಿದೆ.

ಡಿಸೆಂಬರ್ 4, 2021ರಂದು ರಾಸಾಯನಿಕ ದುರಂತ ನಿವಾರಣಾ ದಿನದ ಅಂಗವಾಗಿ ಅಪಾಯಕಾರಿ ರಾಸಾಯನಿಕ ಕಾರ್ಖಾನೆಗಳಲ್ಲಿ ಆನ್-ಸೈಟ್ ಎಮರ್ಜೆನ್ಸಿ ಮಾಕ್ ಡ್ರಿಲ್ ಮತ್ತು ಸಾರ್ವಜನಿಕ ಅರಿವು ಕಾರ್ಯಕ್ರಮಗಳನ್ನು ಏರ್ಪಡಿಸಿ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಮತ್ತು ಅಪಾಯಕಾರಿ ಕಾರ್ಖಾನೆಗಳ ಸುತ್ತ ಮುತ್ತಲಿನಲ್ಲಿ ವಾಸವಾಗಿರುವ ಸಾರ್ವಜನಿಕರಿಗೆ ಮಾಹಿತಿ ನೀಡುವ ಮತ್ತು ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಅವರು ತೆಗೆದುಕೊಳ್ಳಬೇಕಾದ ಸುರಕ್ಷತಾ ತುರ್ತು ಕ್ರಮಗಳ ಕುರಿತು ಮಾರ್ಗದರ್ಶನ ನೀಡಲಾಗಿರುತ್ತದೆ.

ಇದಲ್ಲದೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ಜಿಲ್ಲಾ ವಿಪತ್ತು ನಿರ್ವಹಣಾ ಪ್ಲಾನ್ ತಯಾರಿಸುವಲ್ಲಿ ಇಲಾಖೆಯು ಸಹಕರಿಸುತ್ತಿದೆ ಹಾಗೂ ಜಿಲ್ಲಾಡಳಿತದೊಂದಿಗೆ ಅತಿ ಅಪಾಯಕಾರಿ ಕಾರ್ಖಾನೆಗಳ ಆಫ್-ಸೈಟ್ ಎಮರ್ಜೆನ್ಸಿ ಪ್ಲಾನ್ ಮಾಕ್ ಡ್ರಿಲ್ ಅನ್ನು ಆಯೋಜಿಸಿ ನಡೆಸಲು ಕ್ರಮಕೈಗೂಳ್ಳಲಾಗಿದೆ. 2021ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿಆಫ್-ಸೈಟ್ ಎಮರ್ಜೆನ್ಸಿ ಪ್ಲಾನ್ ಮಾಕ್ ಡ್ರಿಲ್ ಗಳನ್ನು ಆಯೋಜಿಸಿ ಯಶಸ್ವಿಯಾಗಿ ನಡೆಸಲಾಗಿರುತ್ತದೆ.

ಸರ್ಕಾರವು ಇಲಾಖೆಯ ಪುನರ್ ವಿನ್ಯಾಸ ಮಾಡಿ ಆದೇಶಿಸಿರುವ ಪ್ರಕಾರ ನಾಲ್ಕು ವಲಯಗಳಿಗೆ ಕಾರ್ಖಾನೆಗಳ ಜಂಟಿ ನಿರ್ದೇಶಕರನ್ನು ಪ್ರಾದೇಶಿಕ ಮುಖ್ಯಸ್ಥರನ್ನಾಗಿ ಮಾಡಲಾಗಿದೆ. ಬೆಂಗಳೂರು ವಲಯ-1, ವಲಯ-2, ಮೈಸೂರು ವಲಯ ಮತ್ತು ಹುಬ್ಬಳ್ಳಿ ವಲಯವೆಂದು ನಾಲ್ಕು ವಲಯಗಳಾಗಿವೆ. ಉತ್ತಮ ಸಮನ್ವಯಕ್ಕಾಗಿ ಕೋಶದ ಚಟುವಟಿಕೆಗಳನ್ನು ಆಯಾ ಜಂಟಿ ನಿರ್ದೇಶಕರಿಗೆ ವಹಿಸಲಾಗಿದೆ.

ಕಾರ್ಖಾನೆಗಳ ಮತ್ತು ಬಾಯ್ಲರುಗಳ ಅಪರ ನಿರ್ದೇಶಕರು, ಬೆಂಗಳೂರು ಇವರು ಪ್ರಧಾನ ಕಚೇರಿಯಲ್ಲಿ ಸದರಿ ಕೋಶದ ಚಟುವಟಿಕೆಗಳ ಸಹ-ಸಮನ್ವಯ ಹಾಗೂ ಮೇಲ್ವಿಚಾರಣೆ ಮಾಡುತ್ತಿದ್ದಾರೆ.

ಆನ್-ಸೈಟ್ ತುರ್ತು ಪರಿಸ್ಥಿತಿ, ಅಣಕು ಪ್ರದರ್ಶನ, ಆಫ್-ಸೈಟ್ ತುರ್ತು ಪ್ರದರ್ಶನ, ಎಂಎಎಚ್ ಕಾರ್ಖಾನೆಗಳ ಪರಿವೀಕ್ಷಣೆ, ಎಂಎಎಚ್ ಕಾರ್ಖಾನೆಗಳ ಬಗ್ಗೆ ವೆಬಿನಾರ್ ಗಳನ್ನು ಆಯೋಜಿಸುವುದು, ಎನ್ ಡಿಆರ್ ಎಫ್ ನೊಂದಿಗೆ ಸಮನ್ವಯ ಸಾಧಿಸುವುದು ಇತ್ಯಾದಿ ಕೆಲಸ ಕಾರ್ಯಗಳನ್ನು ಕೋಶದ ಮೂಲಕ ನಡೆಸಲಾಗುತ್ತಿದೆ.

## ತರಬೇತಿ ಮತ್ತು ಕೌಶಲ್ಯ ಅಭಿವೃದ್ದಿ ಕೋಶ:

ಇಲಾಖೆಯಲ್ಲಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ದಿ ಕೋಶವನ್ನು ಬೆಂಗಳೂರಿನ ಕಾರ್ಖಾನೆಗಳ ಜಂಟಿ ನಿರ್ದೇಶಕರು-1 ರವರ ಮೇಲ್ವಿಚಾರಣೆಯಲ್ಲಿ ನಿರ್ವಹಿಸಲಾಗುತ್ತಿದೆ. ಸದರಿಯವರು ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆಯ ಮೇಲ್ವಿಚಾರಣೆಯನ್ನು ಸಹ ವಹಿಸಿರುತ್ತಾರೆ.

ಸದರಿ ಕೋಶದ ಕಾರ್ಯಚಟುವಟಿಕೆಗಳನ್ನು ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆಯ ಮೂಲಕ ತರಬೇತಿ, ಕೌಶಲ್ಯ ಅಭಿವೃದ್ದಿ ಹಾಗೂ ಸುರಕ್ಷತೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದಂತೆ ವಿವಿಧ ಭಾಗೀದಾರರಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ನಿರ್ವಹಿಸಲಾಗುತ್ತಿದೆ.

### 1.4 ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆ (ನೋ.) (ಸ್ಥಾಪನೆ 1985)

**ಸಂಸ್ಥೆಯ ಉದ್ದೇಶ:-**

ಉದ್ದೇಶದ ಬಗ್ಗೆ ಅರಿವು ಮೂಡಿಸಲು ಮಾಹಿತಿಯನ್ನೊಳಗೊಂಡ ಬ್ಯಾನರ್ ಗಳನ್ನು ಆವರಣದ ಪ್ರಮುಖ ಸ್ಥಳಗಳಲ್ಲಿ ಪ್ರಚುರ ಪಡಿಸಲಾಯಿತು.

**ರಾಜ್ಯ ಮಟ್ಟದ ಸುರಕ್ಷತಾ ಪ್ರಶಸ್ತಿಗಳ ವಿವರ:**

1. ಸಣ್ಣ, ಮಧ್ಯಮ ಹಾಗೂ ಬೃಹತ್ ಮತ್ತು ನಿರ್ಮಾಣ ಉದ್ಯಮದ ವಿಭಾಗಗಳಿಂದ ಅತ್ಯುತ್ತಮ ಕಾರ್ಮಿಕ ಪ್ರಶಸ್ತಿಗಳು.
2. ಸಣ್ಣ, ಮಧ್ಯಮ ಹಾಗೂ ಬೃಹತ್ ಮತ್ತು ನಿರ್ಮಾಣ ಉದ್ಯಮದ ವಿಭಾಗಗಳಿಂದ ಅತ್ಯುತ್ತಮ ಉದ್ಯಮ ಪ್ರಶಸ್ತಿಗಳು
3. ಕಾರ್ಖಾನೆಯ ಅತ್ಯುತ್ತಮ ವೈದ್ಯಕೀಯ ಅಧಿಕಾರಿ
4. ಅತ್ಯುತ್ತಮ ಕಲ್ಯಾಣ ಅಧಿಕಾರಿ.
5. ಅತ್ಯುತ್ತಮ ಸುರಕ್ಷತಾ ಅಧಿಕಾರಿ
6. ವಿವಿಧ ರೀತಿಯ ಬಾಯ್ಲರುಗಳ ಸುರಕ್ಷಿತ ನಿರ್ವಹಣೆಯೊಂದಿಗೆ ಅತ್ಯುತ್ತಮ ಕಾರ್ಖಾನೆ.

**2021ನೇ ಸಾಲಿನ ಯೋಜನೆಗಳು, ನಡೆಸಿದ ತರಬೇತಿ ಮತ್ತು ಗುರಿಗಳ ವಿವರಗಳು:**

| ಕ್ರ.ಸಂ | ಕಾರ್ಯಕ್ರಮಗಳು | ವಾರ್ಷಿಕ ಗುರಿ | ಸಾಧನೆ | ಉದ್ದೇಶಿತ ಫಲಾನುಭವಿಗಳ ಸಂಖ್ಯೆ | ತರಬೇತಿಯ ಫಲಾನುಭವಿಗಳ ಸಂಖ್ಯೆ |
|---|---|---|---|---|---|
| 1 | ಒಂದು ದಿನದ ಸುರಕ್ಷತಾ ತರಬೇತಿ ಕಾರ್ಯಕ್ರಮಗಳು | 150 | 11 | 4500 | 350 |

2019-20ನೇ ಸಾಲಿನಲ್ಲಿ ಇಲಾಖೆಯ ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆಯ ವತಿಯಿಂದ ಕಾರ್ಖಾನೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಒಟ್ಟು 150 ಒಂದು ದಿನದ ಸುರಕ್ಷತಾ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 2020 ಮತ್ತು 2021ನೇ ಸಾಲಿನಲ್ಲಿ 160ಕ್ಕೂ ಹೆಚ್ಚು ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಯೋಜಿಸಲಾಗಿತ್ತು. ಆದರೆ ಕೋವಿಡ್-19ರ ಸಂಕಷ್ಟದ ಹಿನ್ನೆಲೆಯಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲು ಸಾಧ್ಯವಾಗಿರುವುದಿಲ್ಲ.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆ ಮುಖೇನ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ಕೋಶದ ಅಡಿಯಲ್ಲಿ ನಡೆಸಲಾಗುತ್ತಿದೆ ಮತ್ತು ಬೆಂಗಳೂರಿನ ಪ್ರಧಾನ ಕಚೇರಿಯ ಕಾರ್ಖಾನೆಗಳ ಜಂಟಿ ನಿರ್ದೇಶಕರು-1 ರವರು ಕರ್ನಾಟಕ ರಾಜ್ಯ ಸುರಕ್ಷತಾ ಸಂಸ್ಥೆಯ ಉಸ್ತುವಾರಿ ಯನ್ನು ವಹಿಸಿಕೊಡಲಾಗಿದೆ.

**ಅಂಕಿ ಅಂಶಗಳು**

**ಅವಧಿ 01.01.2021 ರಿಂದ 31.12.2021ರ ವರೆಗೆ**

**ಕಾರ್ಖಾನೆಗಳ ವಿಭಾಗ:-**

**ನೋಂದಾಯಿತ ಕಾರ್ಖಾನೆಗಳ ವಿವರಗಳು**

| ಕ್ರ.ಸಂ | ಕಾರ್ಯಪ್ರಗತಿ ವಿವರ | ಸಂಖ್ಯೆ |
|---|---|---|
| 1 | ಒಟ್ಟು ನೋಂದಾವಣೆಯಾಗಿರುವ ಕಾರ್ಖಾನೆಗಳ ಸಂಖ್ಯೆ | 17,284 |
| 2 | ನೋಂದಾಯಿತ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ | 16,87,541 |
| 3 | ಪ್ರಸ್ತುತ ಸಾಲಿನಲ್ಲಿ ಲೈಸನ್ಸು ರದ್ದುಪಡಿಸಿ ಪಟ್ಟಿಯಿಂದ ತೆಗೆದು ಹಾಕಲ್ಪಟ್ಟ ಕಾರ್ಖಾನೆಗಳ ಸಂಖ್ಯೆ | 192 |
| 4 | 2021ನೇ ಸಾಲಿನಲ್ಲಿ ನೋಂದಾವಣೆಯಾಗಿರುವ ಕಾರ್ಖಾನೆಗಳ ಸಂಖ್ಯೆ | 679 |
| 5 | ಅಪಾಯಕಾರಿ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ಕಾರ್ಖಾನೆಗಳ ಸಂಖ್ಯೆ | 1556 |
| 6 | ಅತ್ಯಂತ ಅಪಾಯಕಾರಿ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ಕಾರ್ಖಾನೆಗಳ ಸಂಖ್ಯೆ | 82 |
| 7 | ಅನುಮೋದನೆಗೊಂಡಿರುವ ಆನ್ ಸೈಟ್ ಎಮರ್ಜೆನ್ಸಿ ಪ್ಲಾನ್ಸ್ | 82 |
| 8 | ಜಿಲ್ಲಾಡಳಿತದಿಂದ ತಯಾರಾಗಿರುವ ಆಫ್ ಸೈಟ್ ಎಮರ್ಜೆನ್ಸಿ ಪ್ಲಾನ್ಸ್ | 19 |

| ಕ್ರ.ಸಂ | ಪರಿವೀಕ್ಷಣೆಗಳು | ಸಂಖ್ಯೆ |
|---|---|---|
| 1 | ಪರಿವೀಕ್ಷಣೆ ನಡೆಸಿದ ಕಾರ್ಖಾನೆಗಳ ಸಂಖ್ಯೆ | 5402 |
| 2 | ಪರಿವೀಕ್ಷಣೆಯ ಸಮಯದಲ್ಲಿ ಕಂಡು ಬಂದ ಉಲ್ಲಂಘನೆಗಳು | 523 |
| 3 | ಕಾರಣ ಕೇಳಿ ಜಾರಿ ಮಾಡಿದ ನೋಟೀಸುಗಳ ಸಂಖ್ಯೆ | 115 |

| ಕ್ರ.ಸಂ | ಮೊಕದ್ದಮೆಗಳು | ಸಂಖ್ಯೆ |
|---|---|---|
| 1 | ಹೂಡಿದ ಮೊಕದ್ದಮೆಗಳ ಸಂಖ್ಯೆ | 135 |
| 2 | ತೀರ್ಮಾನಿಸಿದ ಮೊಕದ್ದಮೆಗಳಲ್ಲಿ ಆಪಾದಿತರಿಗೆ ಶಿಕ್ಷೆಯಾದ ಪ್ರಕರಣಗಳು | 68 |
| 3 | ದಂಡ ರೂಪದಲ್ಲಿ ವಸೂಲಾದ ಮೊತ್ತ(ರೂಪಾಯಿಗಳಲ್ಲಿ) | 23,79,000/- |
| 4 | ನ್ಯಾಯಾಲಯದಿಂದ ಹಿಂದಕ್ಕೆ ಪಡೆದ ಮೊಕದ್ದಮೆಗಳ ಸಂಖ್ಯೆ | 05 |

| ಕ್ರ.ಸಂ | ವಿನಾಯಿತಿಗಳು | ಸಂಖ್ಯೆ |
|---|---|---|
| 1 | ಕಾರ್ಖಾನೆಗಳ ಕಾಯ್ದೆ, 1948ರ ಪ್ರಕರಣ 65(2) ರಡಿಯಲ್ಲಿ ವಿನಾಯಿತಿ ನೀಡಿದ ಅರ್ಜಿಗಳ ಸಂಖ್ಯೆ | 540 |
| 2 | ವಿನಾಯಿತಿ ನೀಡಲು ತಿರಸ್ಕರಿಸಲಾದ ಕಾರ್ಖಾನೆಗಳ ಸಂಖ್ಯೆ | 10 |

| ಕ್ರ.ಸಂ | ದೂರುಗಳು | ಸಂಖ್ಯೆ |
|---|---|---|
| 1 | ಪಡೆದ ದೂರುಗಳು / ಫಿರ್ಯಾದುಗಳ ಸಂಖ್ಯೆ | 68 |
| 2 | ವಿಲೇವಾರಿಯಾದ ದೂರುಗಳ ಸಂಖ್ಯೆ | 68 |

| ಕ್ರ.ಸಂ | ಅಪಘಾತಗಳು | ಸಂಖ್ಯೆ |
|---|---|---|
| 1 | ವರದಿಯಾದ ಒಟ್ಟು ಅಪಘಾತಗಳ ಸಂಖ್ಯೆ | 225 |
| 2 | ವರ್ಷದಲ್ಲಿ ಸಂಭವಿಸಿದ ಮಾರಣಾಂತಿಕ ಅಪಘಾತಗಳ ಸಂಖ್ಯೆ | 50 |
| 3 | ವರದಿಯಾದ ಗುರುತರ ಅಪಘಾತಗಳ ಸಂಖ್ಯೆ | 12 |

| | | |
|---|---|---|
| 4 | ವರದಿಯಾದ ಬೆಂಕಿ ಅಪಘಾತಗಳ ಸಂಖ್ಯೆ | 01 |

| **ಕ್ರ.ಸಂ** | **ಹೊಸಕಾರ್ಖಾನೆಗಳ ಅನ್ವೇಷಣೆ** | **ಸಂಖ್ಯೆ** |
|---|---|---|
| 1 | ಪತ್ತೆ ಹಚ್ಚಿದ ಅನೋಂದಾಯಿಯ ಕಾರ್ಖಾನೆಗಳ ಸಂಖ್ಯೆ | 102 |

| **ಕ್ರ.ಸಂ** | **ಸಾರ್ವಜನಿಕ ಕುಂದುಕೊರತೆ ನಿವಾರಣೆ** | **ಸಂಖ್ಯೆ** |
|---|---|---|
| 1 | ಸಾರ್ವಜನಿಕ ಕುಂದುಕೊರತೆಗಳ ಬಗ್ಗೆ ಸ್ವೀಕೃತವಾದ ದೂರುಗಳು | 15 |
| 2 | ವಿಲೇ ಆದ ದೂರುಗಳು | 15 |
| 3 | ಬಾಕಿ ಇರುವ ಸಾರ್ವಜನಿಕ ದೂರುಗಳು | 00 |

| **ಕ್ರ. ಸಂ** | **ಮಾಹಿತಿ ಹಕ್ಕು ಅಧಿನಿಯಮ, 2005** | **ಸಂಖ್ಯೆ** |
|---|---|---|
| 1 | ಮಾಹಿತಿ ಕೋರಿ ಬಂದ ಅರ್ಜಿಗಳ ಸಂಖ್ಯೆ | 207 |
| 2 | ಮಾಹಿತಿ ಒದಗಿಸಿ ವಿಲೇಮಾಡಲಾದ ಅರ್ಜಿಗಳ ಸಂಖ್ಯೆ | 205 |
| 3 | ಬಾಕಿ ಇರುವ ಅರ್ಜಿಗಳ ಸಂಖ್ಯೆ | 02 |
| 4 | ಮಾಹಿತಿ ಒದಗಿಸಿ ಅರ್ಜಿದಾರರಿಂದ ಪಡೆದ ಶುಲ್ಕ (ರೂ. ಗಳಲ್ಲಿ) | ರೂ. 2,902/- |
| 5 | 1ನೇ ಅಫೀಲು ಪ್ರಕರಣಗಳ (ಸಾರ್ವಜನಿಕ ಪ್ರಾಧಿಕಾರಕ್ಕೆ) ಸಂಖ್ಯೆ | 63 |
| 6 | 2ನೇ ಅಫೀಲು ಪ್ರಕರಣಗಳ (ರಾಜ್ಯ ಮಾಹಿತಿ ಆಯೋಗಕ್ಕೆ) ಸಂಖ್ಯೆ | - |

ನಿರ್ದೇಶಕರು,
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು.

